ಇಂದು ದಿನಾಂಕಃ 29.05.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ ಎನ್ ವಿ ಪಿ ವಕೀಲರಿಂದಃ

ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಈ ದಿನ ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

| ಕ್ರ.ಸಂಖ್ಯೆಃ | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | ಭೂನ್ಯಾಯಮಂಡಳಿ ಹಿರೇಕೆರೂರು ನ್ಯಾಯಾಧೀಕರಣದ ಆದೇಶದ ದೃಡೀಕೃತ ನಕಲು ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-12 |
| 2. | ಪಾರ್ಮ ನಂ. 10 ರ ದೃಡೀಕೃತ ನಕಲು ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-13 |

ಈ ಮೇಲ್ಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು. ಆದ್ದರಿಂದ ನನ್ನ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ .

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ನನ್ನ ಮದುವೆಯಾಗಿ ಸುಮಾರು 30 ವರ್ಷ ಆಗಿರುತ್ತದೆ. 30 ವರ್ಷಗಳಿಂದ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನನ್ನ ಮದುವೆಯಾದ ನಂತರ ದಾವಾ ಆಸ್ತಿಯನ್ನು ನನ್ನ ತಮ್ಮ ವಹಿವಾಟು ಮಾಡುತ್ತಿದ್ದರು. ದಾವಾ ಆಸ್ತಿಯನ್ನು ನಾನು ಸಾಗುವಳಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ತೀರಿಕೊಂಡು ಸುಮಾರು 20 ವರ್ಷಗಳು ಆಗಿರುತ್ತದೆ. 20 ವರ್ಷಗಳಿಂದಲೂ ನನ್ನ ತಮ್ಮ ದಾವಾ ಆಸ್ತಿಯನ್ನು ವಹಿವಾಟು ಮಾಡಿಕೊಂಡು ಬರುತ್ತಿದ್ದಾರೆ. ದಾವಾ ಆಸ್ತಿಯಲ್ಲಿ ನಾನು 5 ವರ್ಷದ ಹಿಂದೆ ಹಿಸ್ಸೆಯನ್ನು ಕೇಳಿದ್ದೆ. ನಾನು ಮದುವೆಯಾಗಿ ಹೋಗಿರುವ ಕಾರಣದಿಂದ ದಾವಾ ಆಸ್ತಿಯಲ್ಲಿ ನನಗೆ ಹಿಸ್ಸೆದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.